ದಿ.06.11.2025 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ಅರ್ಜಿದರರ ಪರ ಶ್ರೀ ಎ.ಎನ್.ಟಿ ವಕೀಲರಿಂದ.**

ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಹಾಜರು ಪಡಿಸಿದ್ದು, ಅದರಲ್ಲಿರುವ ಸಂಗತಿಗಳೆಲ್ಲಾ ಸತ್ಯವಿದ್ದು, ಅದನ್ನು ನಾನೇ ಹೇಳಿ ಬರೆಸಿದ್ದೇನೆ ಹಾಗೂ ಪ್ರಮಾಣ ಪತ್ರಕ್ಕೆ ನಾನೇ ಸಹಿ ಮಾಡಿರುತ್ತೇನೆ.

**ಮುಂದುವರಿಂದ ಮುಖ್ಯವಿಚಾರಣೆಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

*(ರಾಘವೇಂದ್ರ. ಡಿ.)*
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಭದ್ರಾವತಿ

ದಿ.06.02.2026 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದರರ ಪರ ಶ್ರೀ ಎ.ಎನ್.ಟಿ ವಕೀಲರಿಂದ.**

1. ವಂಶವೃಕ್ಷವನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-01 ಎಂದು ಗುರುತಿಸಲಾಯಿತು.
2. ಆನ್ ಲೈನ್ ಎಂ.ಆರ್ ಸಂಖ್ಯೆ ಟಿ-10/2025-26 ರ ಮುಟೇಶನ್ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ತಕರಾರಿಗೆ ಒಳಪಟ್ಟು ನಿಪಿ-02 ಎಂದು ಗುರುತಿಸಲಾಯಿತು.
3. ಆನ್ ಲೈನ್ ಎಂ.ಆರ್ ಸಂಖ್ಯೆ ಟಿ-09/2025-26 ರ ಮುಟೇಶನ್ ಪ್ರತಿಯನ್ನು ಅದನ್ನು ತಕರಾರಿಗೆ ಒಳಪಟ್ಟು ನಿಪಿ-03 ಎಂದು ಗುರುತಿಸಲಾಯಿತು.
4. ಎರಡು ಆನ್ ಲೈನ್ ಪ್ರತಿಯ ಆರ್.ಟಿ.ಸಿ ಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ತಕರಾರಿಗೆ ಒಳಪಟ್ಟು ನಿಪಿ-04 ಮತ್ತು 05 ಎಂದು ಗುರುತಿಸಲಾಯಿತು.

5. 03 ಆನ್ ಲೈನ್ ಇ.ಸಿ ದಾಖಲೆಗಳನ್ನು ಹಾಜರು ಪಡಿಸಿದ್ದು ಅವುಗಳ ನ್ನು ತಕರಾರಿಗೆ ಒಳಪಟ್ಟು ಕ್ರವುವಾಗಿ ನಿಪಿ-6 ರಿಂದ ನಿಪಿ-08 ಎಂದು ಗುರುತಿಸಲಾಯಿತು.
6. ಕೈ ಬರವಣಿಗೆಯ 12 ಆರ್.ಟಿ.ಸಿ ಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ-9 ಎಂದು ಗುರುತಿಸಲಾಯಿತು.
7. ಆನ್ ಲೈನ್ ವಂಶವೃಕ್ಷದ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-10 ಎಂದು ಗುರುತಿಸಲಾಯಿತು.
8. ದಿಃ 28-08-2013 ರ ಪಂಚಾಯ್ತಿ ಪರಿಕತ್ ಅನ್ನು ಹಾಜರು ಪಡಿಸಿದ್ದು ಪ್ರತಿವಾದಿ ಪರ ವಕೀಲರು ಸದರಿ ದಾಖಲೆಯನ್ನು ಗುರುತು ಮಾಡಲು ಬರುವುದಿಲ್ಲ ಎಂದು ತಕರಾರು ಮಾಡಿರುತ್ತಾರೆ, ವಕೀಲರ ತಕರಾರಿಗೆ ಒಳಪಟ್ಟು ಅದನ್ನು ನಿಪಿ-11 ಎಂದು ಗುರುತಿಸಲಾಯಿತು.
9. ಸರ್ವೆ ನಂ. 26/3-ಎ ಕ್ಕೆ ಸಂಬಂದಪಟ್ಟಂತಹ ಒಂದು ಆನ್ ಲೈನ್ ಆರ್.ಟಿ.ಸಿಯನ್ನು ಹಾಜರು ಪಡಿಸಿದ್ದು ಅದನ್ನು ತಕರಾರಿಗೆ ಒಳಪಟ್ಟು ನಿಪಿ-12 ಎಂದು ಗುರುತಿಸಲಾಯಿತು.
10. ಸರ್ವೆ ನಂ. 28/1 ಕ್ಕೆ ಸಂಬಂದಪಟ್ಟಂತಹ ಒಂದು ಆನ್ ಲೈನ್ ಆರ್.ಟಿ.ಸಿಯನ್ನು ಹಾಜರು ಪಡಿಸಿದ್ದು ಅದನ್ನು ತಕರಾರಿಗೆ ಒಳಪಟ್ಟು ನಿಪಿ-13 ಎಂದು ಗುರುತಿಸಲಾಯಿತು.
11. ಸರ್ವೆ ನಂ. 64/1ಎ-ಪಿ-1 ಕ್ಕೆ ಸಂಬಂದಪಟ್ಟಂತ ಒಂದು ಆನ್ ಲೈನ್ ಆರ್.ಟಿ.ಸಿಯನ್ನು ಹಾಜರು ಪಡಿಸಿದ್ದು ಅದನ್ನು ತಕರಾರಿಗೆ ಒಳಪಟ್ಟು ನಿಪಿ-14 ಎಂದು ಗುರುತಿಸಲಾಯಿತು.
12. ಸರ್ವೆ ನಂ. 27/3 ಕ್ಕೆ ಸಂಬಂದಪಟ್ಟಂತಹ ಒಂದು ಆನ್ ಲೈನ್ ಆರ್.ಟಿ.ಸಿಯನ್ನು ಹಾಜರು ಪಡಿಸಿದ್ದು ಅದನ್ನು ತಕರಾರಿಗೆ ಒಳಪಟ್ಟು ನಿಪಿ-15 ಎಂದು ಗುರುತಿಸಲಾಯಿತು.
13. ಸರ್ವೆ ನಂ. 38/6 ಕ್ಕೆ ಸಂಬಂದಪಟ್ಟಂತಹ ಒಂದು ಆನ್ ಲೈನ್ ಆರ್.ಟಿ.ಸಿಯನ್ನು ಹಾಜರು ಪಡಿಸಿದ್ದು ಅದನ್ನು ತಕರಾರಿಗೆ ಒಳಪಟ್ಟು ನಿಪಿ-16 ಎಂದು ಗುರುತಿಸಲಾಯಿತು.
14. 4 ಅಸೆಸಮೆಂಟ್ ರಿಜಿಸ್ಟರ್ ಎಕ್ಸಟ್ರಾಕ್ಟ ಅನ್ನು ಹಾಜರು ಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-17 ರಿಂದ ನಿಪಿ-20 ಎಂದು ಗುರುತಿಸಲಾಯಿತು.

**ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ರಾಘವೇಂದ್ರ. ಡಿ.)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಭದ್ರಾವತಿ

ದಿ.25.03.2026 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಸ್.ಕೆ ವಕೀಲರಿಂದ.**

1. ಈ ದಾವೆಯನ್ನು ಮಾಡಲು ನಾನು ಮತ್ತು ನನ್ನ ತಾಯಿ ಮಾಹಿತಿಯನ್ನು ಕೊಟ್ಟಿರುತ್ತೇವೆ. ರುದ್ರಪ್ಪ ನನ್ನ ದೊಡ್ಡಪ್ಪ. ಒಟ್ಟು ಕುಟುಂಬಕ್ಕೆ ಎಷ್ಟು ಆಸ್ತಿ ಇತ್ತು ಎಂಬುದರ ಮಾಹಿತಿ ನನಗೆ ಇರುತ್ತದೆ. ಈ ದಾವೆಯಲ್ಲಿ ಹೇಳಿರುವ '**ಎ**' ಮತ್ತು '**ಬಿ**' ಶೆಡ್ಯೂಲ್ ಆಸ್ತಿಗಳನ್ನು ಹೊರತು ಪಡಿಸಿ ಬೇರೆ ಆಸ್ತಿಗಳು ಒಟ್ಟು ಕುಟುಂಬದಲ್ಲಿರುವುದಿಲ್ಲ. ಒಟ್ಟು ಕುಟುಂಬದ ಮುಖ್ಯಸ್ಥರಾಗಿ ನನ್ನ ತಂದೆ ಕೆಲಸ ಮಾಡುತ್ತಿದ್ದರು. ಒಟ್ಟು ಕುಟುಂಬದ ವ್ಯವಹಾರಗಳನ್ನು ನನ್ನ ತಂದೆ ನಾನು ಹುಟ್ಟಿದಾಗಿನಿಂದಲ್ಲೂ ನಡೆಸುತ್ತಾ ಬಂದಿರುತ್ತಾರೆ.

2. ನನ್ನ ಅಜ್ಜ ದೊಡ್ಡನಂಜಪ್ಪನವರಿಗೆ ಎಷ್ಟು ಆಸ್ತಿ ಇತ್ತು ಎಂದು ನನಗೆ ಗೊತ್ತಿರುತ್ತದೆ. ನನ್ನ ಅಜ್ಜ ದೊಡ್ಡನಂಜಪ್ಪನವರು ಎಷ್ಟು ಆಸ್ತಿಗಳನ್ನು ಮಾರಾಟ ಮಾಡಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ, ಆದರೆ ಖರೀದಿ ಮಾಡಿರುವ ವಿಚಾರ ಮಾತ್ರ ಗೊತ್ತಿರುತ್ತದೆ. ನನ್ನ ತಂದೆ ಮತ್ತು ರುದ್ರಪ್ಪನವರು ಒಟ್ಟು ಕುಟುಂಬದಲ್ಲಿ ಏನೇನು ಕೆಲಸ ಮಾಡುತ್ತಿದ್ದರು ಎಂದು ನನಗೆ ಗೊತ್ತಿರುತ್ತದೆ. ಅವರಿಬ್ಬರು ವ್ಯವಸಾಯದ ಜೊತೆಗೆ ಒಟ್ಟು ಕುಟುಂಬದ ಪರವಾಗಿ ಭತ್ತ ಮತ್ತು ಜೋಳದ ವ್ಯಾಪಾರ ಮಾಡುತ್ತಿದ್ದರು. ಅವರಿಗೆ ಎಷ್ಟು ಆದಾಯವಿತ್ತು ಎಂಬುದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ.

3. ದಾವಾ-ಎ-ಶೆಡ್ಯೂಲ್ ಐಟಂ.ನಂಬರ್-01, 02, 04 ಮತ್ತು 06 ಅನ್ನು ನನ್ನ ತಂದೆ ಕುಟುಂಬದ ಮುಖ್ಯಸ್ಥರಾಗಿದ್ದ ಕಾರಣ ಅವರ ಹೆಸರಿಗೆ ಖರೀದಿ ಮಾಡಿರುತ್ತಾರೆಂದರೆ ಸರಿ. ನನ್ನ ತಂದೆಗಿಂತ ಮುಂಚೆ ನನ್ನ ದೊಡ್ಡಪ್ಪನವರಾದ ರುದ್ರಪ್ಪನವರು ದಿಃ 06-06-2020 ರಂದು ಮೃತಪಟ್ಟಿರುತ್ತಾರೆ. ನನ್ನ ದೊಡ್ಡಪ್ಪ ಮತ್ತು ನನ್ನ ತಂದೆಯ ಸಂಬಂಧ ಚೆನ್ನಾಗಿಯೇ ಇತ್ತು. ನನ್ನ ತಂದೆ ಒಂದು ಜಮೀನನ್ನು ನನ್ನ ಹೆಸರಿಗೆ ದಾನಪತ್ರವನ್ನು ಬರೆದುಕೊಟ್ಟಿದ್ದರಿಂದ ನನ್ನ ತಂದೆ ಮತ್ತು ನನ್ನ ದೊಡ್ಡಪ್ಪನವರ ನಡುವೆ ಬಿನ್ನಾಭಿಪ್ರಾಯ ಬಂದಿರುತ್ತದೆ ಎಂದರೆ ಸರಿಯಲ್ಲ. ನನ್ನ ಕುಟುಂಬದ ಮುಖ್ಯಸ್ಥರಾಗಿ ಎಲ್ಲಾ ಸದಸ್ಯರನ್ನು ಒಂದೇ ರೀತಿಯಲ್ಲಿ ಕಾಣುತ್ತಿದ್ದರು ಎಂದರೆ ಸರಿ. ನನ್ನ ತಂದೆ 01 ನೇ ಪ್ರತಿವಾದಿಯನ್ನು ಸ್ವಂತ ಮಗನ ಹಾಗೆ ನೋಡುತ್ತಿದ್ದರು ಎಂದರೆ ಸರಿ.

ದಾವಾ–ಎ–ಶೆಡ್ಯೂಲಿನ ಐಟಂ.ನಂಬರ್–06 ರ ಸರ್ವೆ ನಂ. 38/6 ಅನ್ನು ನನ್ನ ಹೆಸರಿಗೆ ದಾನಪತ್ರ ಬರೆದುಕೊಟ್ಟ ನಂತರ ಕುಟುಂಬದಲ್ಲಿ ಬಿನ್ನಾಭಿಪ್ರಾಯ ಬಂದಿರುತ್ತದೆ ಎಂದರೆ ಸರಿ.

**4.** ದಾವಾ–ಬಿ–ಶೆಡ್ಯೂಲಿನ ಆಸ್ತಿಗಳು ನಮ್ಮ ಕುಟುಂಬಕ್ಕೆ ಹೇಗೆ ಬಂದಿರುತ್ತದೆ ಎಂದು ನನಗೆ ಮಾಹಿತಿ ಇರುವುದಿಲ್ಲ. ನನ್ನ ಅಜ್ಜ ದಾವಾ–ಬಿ ಶೆಡ್ಯೂಲ್ ನ ಯಾವ ಐಟಂ.ನಂಬರ್ ನಲ್ಲಿ ಮನೆ ಕಟ್ಟಿರುತ್ತಾರೆಂದು ನನಗೆ ಮಾಹಿತಿ ಇರುವುದಿಲ್ಲ. ದಾವಾ–ಬಿ ಶೆಡ್ಯೂಲ್ ಆಸ್ತಿಗಳನ್ನು ಹೊರತು ಪಡಿಸಿ ಬೇರೆ ಯಾವುದೇ ಮನೆ ಮತ್ತು ನಿವೇಶನ ಒಟ್ಟು ಕುಟುಂಬಕ್ಕೆ ಇರುವುದಿಲ್ಲ. ದಾವಾ–ಬಿ ಶೆಡ್ಯೂಲಿನ ಯಾವಾ ಆಸ್ತಿಯಲ್ಲಿ ನಾವೇಲ್ಲರೂ ವಾಸವಾಗಿದ್ದೇವು ಎಂದು ಹೇಳಲು ಆಗುವುದಿಲ್ಲ. ನನ್ನ ತಂದೆ ಮತ್ತು ನನ್ನ ದೊಡ್ಡಪ್ಪ ಒಂದೇ ಮನೆಯಲ್ಲಿ ವಾಸವಾಗಿದ್ದರು ಎಂದರೆ ಸರಿ. ನನ್ನ ದೊಡ್ಡಪ್ಪನವರಾದ ರುದ್ರಪ್ಪನ ಇಬ್ಬರು ಮಕ್ಕಳಾದ ನಂಜುಂಡಪ್ಪ ಮತ್ತು ಮೃತ ಮಲ್ಲೇಶ ರವರು ಭತ್ತ ಮತ್ತು ಜೋಳದ ವ್ಯಾಪಾರದಲ್ಲಿ ಸಹಾಯ ಮಾಡುತ್ತಿದ್ದರು ಎಂದರೆ ಸರಿ. ನನ್ನ ತಂದೆಗೆ ಒಟ್ಟು ಕುಟುಂಬದಲ್ಲಿ ಸಂಪಾದನೆ ಮಾಡಿದಂತಹ ಆಸ್ತಿಗಳನ್ನು ಅವರ ಅಣ್ಣನ ಮಕ್ಕಳಿಗೆ ಕೊಡಬಾರದೆಂಬ ಯಾವುದೇ ದುರ್ಭಾವನೆ ಇರಲಿಲ್ಲ. ಸಂಪ್ರಾದಯಂತೆ ಎಲ್ಲಾ ಆಸ್ತಿಗಳು 01 ನೇ ಪ್ರತಿವಾದಿಗೆ ಸೇರಬೇಕೆಂದು ಹೇಳಿ ನನ್ನ ತಂದೆ ಬಯಸಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ಮೃತಪಡುವ ತನಕ 01 ನೇ ಪ್ರತಿವಾದಿಯೇ ಅವರ ಯೋಗಕ್ಷೇಮವನ್ನು ನೋಡಿಕೊಂಡಿರುತ್ತಾರೆಂದರೆ ಸರಿಯಲ್ಲ. ನನ್ನ ತಂದೆ ಕೋರನಾ ಬಂದು ಮೃತಪಟ್ಟಿರುತ್ತಾರೆ ಎಂದರೆ ಸರಿ. 01 ನೇ ಪ್ರತಿವಾದಿಯೇ ನನ್ನ ತಂದೆಯನ್ನು ಆಸ್ಪತ್ರೆಗೆ ದಾಖಲು ಮಾಡಿರುತ್ತಾರೆ ಮತ್ತು ನೋಡಿಕೊಂಡಿರುತ್ತಾರೆ ಎಂದರೆ ಸರಿ. 01 ನೇ ಪ್ರತಿವಾದಿಯೇ ನನ್ನ ತಂದೆಯ ಆಸ್ಪತ್ರೆಯ ಖರ್ಚುಗಳನ್ನು ಕೊಟ್ಟಿರುತ್ತಾರೆ. 01 ನೇ ಪ್ರತಿವಾದಿಯೇ ನನ್ನ ತಂದೆಯ ಕ್ರಿಯಾ ಕರ್ಮಗಳನ್ನು ನಡೆಸಿರುತ್ತಾರೆ ಎಂದರೆ ಸರಿ. 01 ನೇ ಪ್ರತಿವಾದಿ ನನ್ನನ್ನು ಸ್ವಂತ ತಂಗಿಯನ್ನಾಗಿ ನೋಡಿಕೊಂಡು ಬಂದಿರುತ್ತಾರೆ ಎಂದರೆ ಸರಿ. ನಾನು ಮದುವೆಯಾಗಿ ನನ್ನ ಗಂಡನ ಮನೆಗೆ ಹೋದ ನಂತರ, ನನ್ನ ಗಂಡ ಕುಟುಂಬದ ವ್ಯವಹಾರಗಳಲ್ಲಿ ಮದ್ಯಾ ಪ್ರವೇಶಿಸಿದ ನಂತರ ನಮ್ಮ ಕುಟುಂಬದಲ್ಲಿ ಬಿನ್ನಾಭಿಪ್ರಾಯ ಬಂದಿರುತ್ತದೆ ಎಂದರೆ ಸಾಕ್ಷಿಯು ಮೊದಲಿನಿಂದಲ್ಲೂ ಬಿನ್ನಾಭಿಪ್ರಾಯ ಬಂದಿರುತ್ತದೆ ಎಂದು ಹೇಳುತ್ತಾರೆ.

**5.** ನನ್ನ ಅಜ್ಜ ದೊಡ್ಡನಂಜಪ್ಪನವರಿಗೆ ರುದ್ರಮ್ಮ, ಗೌರಮ್ಮ ಮತ್ತು 04 ನೇ ಪ್ರತಿವಾದಿ ದೇವಿರಮ್ಮ ಎಂಬ ಮೂರು ಜನ ಹೆಣ್ಣು ಮತ್ತು ಬಸವರಾಜಪ್ಪ ಮತ್ತು ರುದ್ರಪ್ಪ ಇಬ್ಬರು ಗಂಡು ಮಕ್ಕಳು ಎಂದರೆ ಸರಿ. ರುದ್ರಮ್ಮನವರು ಈಗ ಮೃತ ಪಟ್ಟಿರುತ್ತಾರೆ ಎಂದರೆ ಸರಿ. ಅವರಿಗೆ ರತ್ನಮ್ಮ ಮತ್ತು ಬಸಮ್ಮ ಎಂಬ ಇಬ್ಬರು ಹೆಣ್ಣು ಮಕ್ಕಳಿರುತ್ತಾರೆ ಎಂದರೆ ಸರಿ. ಗೌರಮ್ಮ ಮೃತಪಟ್ಟಿರುತ್ತಾರೆ ಎಂದರೆ ಸರಿ. ಗೌರಮ್ಮನವರಿಗೆ ರುದ್ರಪ್ಪ ಮತ್ತು ದಾಕ್ಷಯಣಮ್ಮ ಎಂಬ ಇಬ್ಬರು ಮಕ್ಕಳೆಂದರೆ ಸರಿ. ಗೌರಮ್ಮನವರ ಮಗ ರುದ್ರಪ್ಪ ಮೃತ ಪಟ್ಟಿರುತ್ತಾರೆ ಎಂದರೆ ಸರಿ. ಗೌರಮ್ಮನವರ ಮಗ ರುದ್ರಪ್ಪನ ಹೆಂಡತಿಯ ಮಂಜುಳ ಮತ್ತು ಅವರಿಗೆ ಬಿಂದು ಮತ್ತು ಮಲ್ಲಿಕಾರ್ಜುನ ಎಂಬ ಇಬ್ಬರು ಮಕ್ಕಳಿರುತ್ತಾರೆ ಎಂದರೆ ಸರಿ. ದೇವಿರಮ್ಮರವನ್ನು ಹೊರತು ಪಡಿಸಿ ಬೇರೆ ಯಾರನ್ನು ಪಕ್ಷಗಾರರನ್ನಾಗಿ ಸೇರಿಸಿರುವುದಿಲ್ಲ ಎಂದರೆ ಸರಿ. ಮೇಲೆ ಹೇಳಿದವರು ಎಲ್ಲಿ ವಾಸವಾಗಿರುತ್ತಾರೆ

ಎಂಬ ವಿಚಾರ ನನಗೆ ಗೊತ್ತಿರುತ್ತದೆ. ಅವರೆಲ್ಲರೂ ದೊಡ್ಡನಂಜಪ್ಪನ ವಾರಸುದಾರರೆಂದು ನನಗೆ ಗೊತ್ತಿರುತ್ತದೆ. ದೊಡ್ಡನಂಜಪ್ಪನ ವಾರಸುದಾರರು ಯಾರ್ಯಾರು ಇದ್ದಾರೆಂಬ ವಿಚಾರ ನನಗೆ ಗೊತ್ತಿದ್ದರೂ ಸಹ ನಾನು ಉದ್ದೇಶಪೂರಕವಾಗಿ ಸೇರಿಸಿಲ್ಲ ಎಂದರೆ ಸರಿ.

**ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

*(ರಾಘವೇಂದ್ರ. ಡಿ.)*
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಭದ್ರಾವತಿ